ಕ್ಕುಗಳನ್ನ ಆ ಯಾ ಟ್ರೆಜರೀ ಆಫೀಸರ್‌ಗಳು 3 ತಿಂಗಳಿಗೆ ಬಂದಾವರ್ತಿ ತರಸಿ ತನಖೀ ಮಾಡತಕ್ಕದ್ದು.

12. ನಗದು ಹಣಕ್ಕೆ ಸ್ಟ್ಯಾಂಪುಗಳನ್ನ ಖರೀದೀಮಾಡುವ ಸ್ಟ್ಯಾಂಪು ವೆಂಡರ್‌ಗಳು ನಂ. 2ನೇ ರೋಜ್ ಲಿಖ್ತ ಮಟ್ಟಿಗೆ ಯಿಡಬೇಕಾಗಿ ಇರುತ್ತೆ. ರೂಲ್‌ಸ್‌ಗಳಿಗೆ ನಿಗಾ ಕೊಡಬೇಕು. ತಾತ್ಕಾಲದ ಅವಲೋಕನಕ್ಕಾಗಿ ಸದರೀ ರೂಲ್‌ಸ್‌ಗಳನ್ನ ಇದರ ಬಾಜೂವಲ್ಲಿ ಪುನಹ ಛಾಪಿಸಿ ಯಿರುತ್ತೆ. ಸದರೀ ರೂಲ್ಸ್‌ಗಳ ಮೇರೆ ಸ್ಟ್ಯಾಂಪು ವೆಂಡರ್‌ಗಳ ಲೆಕ್ಕುಗಳನ್ನ ಮೂರು ತಿಂಗಳಿಗೆ ಬಂದಾವರ್ತಿ ತನಖೀ ಮಾಡಲ್ಪಡಬೇಕಾದ ವಿಷಯದಲ್ಲಿ ಯಿನ್ನು ಮೇಲೆ ತಕ್ಕ ನಿಗಾ ಕೊಡಬೇಕೆಂದು ಕೋರಿ ಯಿರುತ್ತೆ. ಸದರೀ ಲಿಖ್ತಗಳು ಭರ್ತಿಯಾಗಿ ಬರದಮೇಲೆ ಸ್ಟ್ಯಾಂಪು ವೆಂಡರ್‌ಗಳಿಗೆ ರೀದೀ ಕೊಟ್ಟು ಸದರೀ ಲಿಖ್ತಗಳನ್ನ ಅವರಿಂದ ತೆಗದುಕೊಂಡು ಟ್ರೆಜರೀ ರಿಕಾರ್ಡಿನಲ್ಲಿ ಭದ್ರವಾಗಿ ಯಿಡತಕ್ಕದ್ದು.

ಎ. ರಂಗಸ್ವಾಮಿಐಯ್ಯಂಗಾರ್,
ಕಾಂಪ್ಟ್ರೋಲರ್.

ಫಾರೆಸ್ಟ್ ಇಲಾಖೆ.

ತಾರೀಖು 11ನೇ ಅಕ್ಟೋಬರ್ 1887.

ಇದರಿಂದ ತಿಳಿಯಪಡಿಸುವದೇನಂದರೆ, ಮೈಸೂರಿಂದ 43ನೇ ಮೈಲಿಯಲ್ಲಿರುವ ಹೆಗ್ಗಡದೇವನಕೋಟೆ ತಾಲ್ಲೂಕು ನಿಸನ ಸ್ಥಳದಲ್ಲಿ ಹೊಸದಾಗಿ ಹಿಡಿಯಲ್ಪಟ್ಟ ಈ ಕೆಳಗೆ ನಮೂದು ಮಾಡಲ್ಪಡುವ ಆನೆಗಳು ಮತ್ತು ಈ ಮಧ್ಯೆ ಕಾಲದಲ್ಲಿ ಹಿಡಿಯಲ್ಪಡುವ ಆನೆಗಳು ಸಹ ಮೈಸೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಸೂಪರ್‌ಟೆಂಡೆಂಟರವರಿಂದ ಸ್ಟ್ 1887ನೇ ಇಸವಿ ನವಂಬರ್ 14ನೇ ತಾರೀಖಿನಲ್ಲಿ ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುವವು.

ನಂಬರು.	ಹೆಸರುಗಳು.	ಜಾತಿ.	ಎತ್ತರ.		ಹಿಡಿಯಲ್ಪಟ್ಟ ತಿಂಗಳು.	ಷರಾ.
			ಅಡಿ.	ಅಂಗುಲ.		
1	ಗಜಲಕ್ಷ್ಮಿ ..	ಹೆಣ್ಣು.	4	10	1887ನೇ ಏಪ್ರೆಲ್	
2	ಸದಾಶಿವ ..	ಗಂಡು	4	5	ಡಿಟೋ ಜೂನ್	
3	ಶುಕಾರಿ ..	ಹೆಣ್ಣು.	4	0	ಡಿಟೋ ಆಗಸ್ಟ್	

ಷರತ್ತುಗಳು—ಶೇಕಡಾ 25 ರೂಪಾಯಿ ಪ್ರಕಾರ ಶೇವಣಿ ಮೊಬಲಗನ್ನು ಕೂಡ್ಲಿ ಸಮೀಪದಲ್ಲಿರುವ ತಾಲ್ಲೂಕು ಖಜಾನೆಯಲ್ಲಿ ಪಾವತೀ ಮಾಡತಕ್ಕದ್ದು. ಬಾಕಿ ಮೊಬಲಗನ್ನು ಹರಾಜ್ ತಾರೀಖು ಲಾಗಾಯತು 15 ದಿನಗಳೊಳಗಾಗಿ ಮತ್ತು ಆನೆಗಳನ್ನು ಸಾಗಿಸಿಕೊಳ್ಳುವದಕ್ಕೆ ಮುಂಚಿತವಾಗಿ ಪಾವತೀ ಮಾಡಬೇಕು, ಇದಕ್ಕೆ ತಪ್ಪಿದರೆ ಶೇವಣಿ ಮೊಬಲಗು ಸರಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುವದಲ್ಲದೆ ಆನೆಗಳು ಪುನಶ್ಚ ಹರಾಜ್ ಮಾಡಲ್ಪಡುವವು ನಷ್ಟಕ್ಕೆ ಅವಲ್ ಖರೀದೀದಾರನು ಗುರಿಯಾಗತಕ್ಕದ್ದು. ಹರಾಜಿನಲ್ಲಿ ಜಾಸ್ತಿ ಹುಟ್ಟಿದರೆ ಅದರಲ್ಲಿ ಆತನಿಗೆ ಯೇನೂ ಸಲ್ಲಲಾರದು.

ಖರೀದಿ ತಾರೀಖು ಲಾಗಾಯತು ಖರೀದಿದಾರನೇ ಆನೆಗಳ ರಾತೀಪು ವಗೈರೆ ಖರ್ಚುಗಳನ್ನ ವಹಿಸತಕ್ಕದ್ದು.

ತಾರೀಖು 3ನೇ ಅಕ್ಟೋಬರ್ 1887.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಮೈಸೂರು ದೇಶದಲ್ಲಿ ಪುಷ್ಕತ್ತಿಯಾದ ಗಂಧದ ಸಾಲೀಯಾನಾ ಹರಾಜುಗಳು ಈ ಕೆಳಗೆ ನಮೂದಾಗುವ ಜಾಗಾಗಳಲ್ಲಿ ಅವುಗಳ ಬಾಜೂವಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಆಯಾ ಡಿಸ್ಟ್ರಿಕ್ಟ್ ಡೆಪ್ಯೂಟಿ ಕಮ್ಮಿಷನರವರು ವ ಫಾರೆಸ್ಟ್ ಆಫೀಸರರುಗಳಿಂದ ನಡಿಸಲ್ಪಡುವವು.

ತಾರೀಖು 24ನೇ ಅಕ್ಟೋಬರ್ 1887.

ಕ್ಯಾಂಪ್ ನಂ. 1580.—ಶ್ರೀಮರ್ ಮಹಾರಾಜಾ ಸರ್ಕಾರದವರು ಹುಕ್ಕುಂ ಮಾಡುವದೇನಂದರೆ. ಇದರಡೀಕಂಡ ಜಮ್ರ್ಮಾ ತಾಕುಗಳು, ಮೈಸೂರು ದೇಶದಲ್ಲಿ ಕೆಲವು ಜಮ್ರ್ಮಾ ತಾಕುಗಳೊಳಗೆ ಗನೀ ಕೆಲಸನಡಿಸುವ ಬಗ್ಯೆ ಲೈಸೆನ್ಸಿಗೋಸ್ಕರ ದರಖಾಸ್ತುಗಳನ್ನು ಅಪೇಕ್ಷಿಸುವಂಥಾ 1887ನೇ ಇಸವಿ ಸೆಪ್ಟಂಬರ್ 12ನೇ ಮುಕ್ತುಂ 113ನೇ ನಂಬರ್ ಇಸ್ತಿಹಾರ್‌ನಾಮೆಯ A ಗುರ್ತಿನ ಆರ್ಡಿಕಿಗೆ ಕೀರಿಸಲ್ಪಡತಕ್ಕದ್ದು:—

ಪ್ರತಿತಾಕಿನ ನಂಬರು.	ಪ್ರತಿ ತಾಲ್ಲೂಕಿನ ಹೆಸರು.	ಪ್ರತಿ ತಾಕು ಇರತಕ್ಕ ಪ್ರದೇಶ.			ಪ್ರತಿ ತಾಕು ಯಾವ ಯಾ ಮ್ಯೋತ್ತರ ರೇಖೆ ಮತ್ತು ದಕ್ಷಿಣೋತ್ತರ ವೃತ್ತಗಳ ಸಮಭುಜ ರೇಖೆಗಳಲ್ಲಿ ಅಡಗಿರುತ್ತೆಂಬುವದು.		ಹಿಂದಿನ ಕಡೇ ಮೇಸ್ತಕಿನಲ್ಲಿ ವಿವರಿಸಲ್ಪಟ್ಟ ಯಾಮ್ಯೋತ್ತರ ರೇಖೆ ಮತ್ತು ದಕ್ಷಿಣೋತ್ತರ ವೃತ್ತಗಳ ಸಮಭುಜ ರೇಖೆಗಳಲ್ಲಿ ಅಡಗಿರುವ ಜಮ್ರ್ಮಾಪೈಕಿ ಇದುವರಿಗೆ ಅನ್ಯಥಾ ವಿಲ್ಹಾಮಾಡಲ್ಪಟ್ಟ ಜಮೀನಿನ ವಿಸ್ತೀರ್ಣ.	ಹಿಂದಿನ ಕಡೇ ಮೇಸ್ತಕಿನಲ್ಲಿ ವಿವರಿಸಲ್ಪಟ್ಟ ಯಾಮ್ಯೋತ್ತರ ರೇಖೆ ಮತ್ತು ದಕ್ಷಿಣೋತ್ತರ ವೃತ್ತಗಳ ಸಮಭುಜ ರೇಖೆಗಳಲ್ಲಿ ಅಡಗಿರುವ ಜಮ್ರ್ಮಾಪೈಕಿ ಇದುವರೆಗೆ ಗ್ರಾಂಟ್ ಮಾಡಲ್ಪಟ್ಟ ಜಮೀನಿನ ವಿಸ್ತೀರ್ಣ.	ಏನಿಲ್ಲ.
		ಡಿಸ್ಟ್ರಿಕ್ಟು.	ತಾಲ್ಲೂಕು.	ಗ್ರಾಮಗಳು.	ಮೊಲಿಕಲ್ ನಂಬರ್.	ದಕ್ಷಿಣೋತ್ತರ ವೃತ್ತಗಳು.	ಯಾಮ್ಯೋತ್ತರ ರೇಖೆ.		
15		ಹಾಸನ	ಚನ್ನರಾಯಪಟ್ಟಣ	1 ಮೂಲಕಟ್ಟೆ ಹಳ್ಳಿ 2 ಮಾದಾಪುರ 3 ರಾಜಾಪುರ	55	12°—56′ ಮತ್ತು 12°—57′ರ ಮಧ್ಯೆ	76°—33′ ಮತ್ತು 76°—35′ರ ಮಧ್ಯೆ		½ ಚದರಮೈಲಿ ಅಂದರೆ, ಪೂರ್ವ ಪಶ್ಚಿಮ ವಂದು ಮೈಲಿ ಉತ್ತರ ದಕ್ಷಿಣ ½ಮೈಲಿ
16		ಸಕ್ಕಲೇಶಪುರ	ಶ್ರೀರಂಗಪಟ್ಟಣ	1 ಹುವ್ವಿನಕೆರೆ 2 ವಡಯಂಡ ಹಳ್ಳಿ 3 ಗೊಬ್ಬಗಾಲ 4 ಕಾಳೇನಹಳ್ಳಿ 5 ಪೆರಮಾಂಡ ಹಳ್ಳಿ	57	12°—25′ ಮತ್ತು 12°—27′ರ ಮಧ್ಯೆ	76°—50′ ಮತ್ತು 76°—51′ರ ಮಧ್ಯೆ		½ ಚದರ ಮೈಲಿ

ತಾರೀಖು 23ನೇ ಅಕ್ಟೋಬರ್ 1887.

ಕ್ಯಾಂಪ್ ನಂ. 1587.—ಷಿಕಾರಿಪುರ ವ ಸೊರಬ ತಾಲ್ಲೂಕಿನ ಇದರಡೀಕಂಡ ಮಾಗಣೀಗಳು ಘಾರೆಸ್ಟು ಕೆಲಸಗಳಿಗೋಸ್ಕರ ಮರ್ಸಾಡೆಯಾದಾಗಿ ಆಚರಿಸಲ್ಪಡತಕ್ಕದ್ದು:—

ಷಿಕಾರಿಪುರ ತಾಲ್ಲೂಕು	ಕಳಂದೂರು	ಮಾಗಣಿ.
	ಬಾರೂರು	,,
ಸೊರಬ ತಾಲ್ಲೂಕು	ಸೊರಬ	,,
	ಕ್ಯಾಸನೂರು	,,
	ಚಂದ್ರಗುತ್ತಿ	,,
	ಬಿಟ್ಟೂರು	,,
	ಶಿಗ್ಗಾ	,,
	ಹೆಬ್ಬಿ	,,

ಬಮೋಜೀಬ್ ಹುಕ್ಕುಂ,
ಆರ್. ವಿಜಯಿಂದ್ರರಾವ್,
ಚೀಫ್ ಸೆಕ್ರೆಟರಿ.